ಉಳಿದು ಅಲ್ಲೇ ಬಿಟ್ಟು ಬಂದಿದೀನಿ. ನನ್ನ ತವರಮನೇಲಿ ಕೊಟ್ಟ ಪದಾರ್ಥಗಳಲ್ಲೂ ದಿನಕ್ಕೊಂದು ಚೊಂಬು, ಬಿಂದಿಗೆ, ಪಾತ್ರೆ, ಬಕೇಟು ಅಂತ ನಿನ್ನ ಮನೇಲಿ ನೀನೇ ಕದ್ದು ಮಾರ್ಕೊಂಡು ಕುಡಿದು ಹಾಳಾಗ್ತಾ ಇದ್ದೆ. ಯಾವಳ್ಯಾವಳದೋ ಜೊತೆಗೆ ಸಂಬಂಧ ಬೇರೆ ನಿನ್ನ ಮೂತಿಗೆ' ಅಂತ ಶಕ್ತಿಮೀರಿ ಚೀರುತ್ತಿದ್ದರು. 'ನನ್ನ ಮೂದೇವಿ ಅಂತೀಯೇನೇ ಮಕ್ಕಳ ಎದುರಿಗೆ? ಏನು ಮಾಡ್ತೀನಿ ನೋಡ್ತಿರು ನಿನ್ನ' ಅಂತ ಮನೆಯಾಗಿ ಮಾರ್ಪಡಿಸಿಕೊಂಡಿದ್ದ ಅಂಗಡಿಗೆ ನುಗ್ಗಿದ.

'ಹೊಡೆಯೋಕ್ಕೆ ಬರ್ತೀಯೇನೋ ಮುಂಡೆಗಂಡ. ನಿನ್ನಿಂದ ದೂರಾಗಿ ಬಂದ್ರೂ ಕಾಟ ತಪ್ಪಲಿಲ್ಲವಲ್ಲ. ಪೊಲೀಸರಿಗೆ ಹೇಳಿ ನಾಲ್ಕು ಬಿಗಿಸಿದ್ರೆ ಸರಿಹೋಗುತ್ತೆ' ಎಂದು ಕುತ್ತಿಗೆಪಟ್ಟಿ ಹಿಡಿದು ಹೊರದೂಡಿದಳು. ಅಷ್ಟರಲ್ಲಿ ಸುತ್ತ ನೆರೆದಿದ್ದ ಜನ ಬಂದು ಅವನನ್ನು, 'ಬಾಳಿಸೋಕ್ಕಾಗದೆ, ಈಗ ಯಾಕಪ್ಪಾ ಬಂದು ಹೆಣ್ಣುಮಕ್ಕಳ ಎದುರಿಗೆ ನಿನ್ನ ಹೆಂಡ್ತಿ ಮೇಲೆ ಕೈ ಮಾಡ್ತೀಯ... ನಡಿ ನಡಿ...' ಅಂತಂದರು ಕೆಲವರು. ಇನ್ಯಾರೋ ಒಬ್ಬ ಹೊಡೆದೇಬಿಟ್ಟ. ಕೋದಂಡಪಾಣಿ ಅದಕ್ಕೂ, 'ದಾಂಡಿಗರನ್ನ ಇಟ್ಟು ಹೊಡೆಸ್ತಿಯೇನೇ ನನ್ನಾ. ನೋಡ್ಕೋತೀನಿ' ಎಂದು ಕೂಗಾಡಿಕೊಂಡು ಹೋದ. ಪಾಪ.. ಅವರಿವರ ಮನೆ ಕಸಮುಸರೆ ಮಾಡಿಕೊಂಡು ಮೂವರು ಮಕ್ಕಳನ್ನ ಸಾಕುತ್ತಿದ್ದ ಸುನಂದಮ್ಮ ಕಣ್ಣಲ್ಲಿ ನೀರು ಹಾಕುತ್ತಿದ್ದರೆ ಅಲ್ಲಿ ನೆರೆದಿದ್ದವರೆಲ್ಲರಿಗೂ ಸಂಕಟವಾಗುತ್ತಿತ್ತು. ತಾಯಿಯನ್ನು ತಬ್ಬಿಕೊಂಡು ಶಾರದಾ ಟೀಚರ್, ಅವರ ತಂಗಿ, ತಮ್ಮಂದಿರು ಒಳಗೆ ಹೋದರು. ಹೀಗೇ ಅದೆಷ್ಟು ಸಲ ನಡೆಯಿತೋ ಜಾತ್ರೆ ಅವರ ಮನೆ ಮುಂದೆ!

ತಂಗಿ ಕೋಕಿಲ ಅಕ್ಕನಿಗಿಂತ ಚೆನ್ನಾಗಿದ್ದಳು. ಶಾರದಾ ಟೀಚರದು ಸಣಕಲು ದೇಹ. ಆದರೆ ಹೈಸ್ಕೂಲು ಓದುತ್ತಿದ್ದ ಕೋಕಿಲ ಮೈಕೈ ತುಂಬಿಕೊಂಡು ವೈನಾಗಿದ್ದಳು. ನಮ್ಮ ಬೀದಿಯಲ್ಲಿ ಕೂರಿಸಿದ್ದ ಗಣೇಶನ ಉತ್ಸವದ ಗಲಾಟೆಯಲ್ಲೊಮ್ಮೆ ಅವಳ ದುಪಟ್ಟಾಕ್ಕೆ ಸೈಕಲ್ ಶಾಪಿನ ಹುಡುಗರು ಬಾಳೆಹಣ್ಣು ಕಟ್ಟಿದ್ದರು. ಸೈಕಲ್ ಶಾಪಿನಲ್ಲಿದ್ದ ವೆಂಕಟ ಹಾಗೂ ಅನಿಲ ಇಬ್ಬರಿಗೂ ಅವಳ ಮೇಲೆ ಮೋಹ ಇತ್ತು. ಆ ಕಾರಣಕ್ಕೆ ಅವರು ಆಗಾಗ ಹೊಡೆದಾಡಿಕೊಳ್ಳುತ್ತಲೂ ಇದ್ದರು. ಇಷ್ಟಾಗಿ ಕೋಕಿಲಳಿಗೆ ಇದಾವುದೂ ತಿಳಿದಿರಲಿಲ್ಲ. ಬೆನ್ನ ಹಿಂದೆ ಶಿಳ್ಳೆ, ಹಾಡು, ಮಾತು ಕೇಳಿದರೆ ತನ್ನನ್ನು ಸೈಕಲ್ ಶಾಪಿನ ಹುಡುಗರು ರೇಗಿಸುತ್ತಿದ್ದಾರೆ ಅಂತಷ್ಟೇ ಅಂದುಕೊಂಡು ಕೆನ್ನೆ ಕೆಂಪಗೆ ಮಾಡಿಕೊಂಡು ಸರಸರನೆ ಗೆಳತಿಯರೊಟ್ಟಿಗೆ ನಡೆದುಹೋಗುತ್ತಿದ್ದಳು. ಒಂದು ಸಲ ವೆಂಕಟ ಹಾಗೂ ಅನಿಲ ಇಬ್ಬರಿಗೂ ಇವಳ ವಿಷಯವಾಗಿ ಎಂದಿನಂತೆ ಜಗಳ ಹೊತ್ತಿಕೊಂಡಿತು. 'ನನ್ನ ಹುಡುಗಿ' ಅಂತ ವೆಂಕಟ, 'ನನ್ನ ಡೌ' ಅಂತ ಅನಿಲ. ಜಗಳ ಹೊಡೆದಾಟದವರೆಗೂ ಹೋಗಿ, ಅಂಗಡಿಯಲ್ಲಿದ್ದ ಯಾವುದೋ ಒಂದು ಕಬ್ಬಿಣದ ಕೊಳವೆ ತೆಗೆದುಕೊಂಡ ವೆಂಕಟ, ಅನಿಲನ ಹೊಟ್ಟೆಗೆ ಚುಚ್ಚಿಬಿಟ್ಟಿದ್ದ. ತಕ್ಷಣ ಅಕ್ಕಪಕ್ಕದವರೆಲ್ಲ ಸೇರಿಕೊಂಡು ಅವನನ್ನು ಆಸ್ಪತ್ರೆಗೆ ಸೇರಿಸಿದರೂ, ವಿಪರೀತ ರಕ್ತ ನಷ್ಟವಾಗಿದ್ದರಿಂದ ಅನಿಲನನ್ನು ಉಳಿಸಿಕೊಳ್ಳಲು ಆಗಲಿಲ್ಲ. ಕೊಲೆ ಕೇಸಾಗಿ ವೆಂಕಟ ಜೈಲಿಗೆ ಹೋದ. ಅವನನ್ನು ಪೊಲೀಸರು ಕರೆದೊಯ್ಯುವಾಗ ಸಿನಿಮೀಯವಾಗಿ ಶಾರದಾ ಟೀಚರ್ ಮನೆ ಮುಂದೆ ಸ್ವಲ್ಪ ಜೀಪು ನಿಲ್ಲಿಸಲು ಹೇಳಿ, ಬಾಗಿಲಲ್ಲಿ ಜನರ ಮಧ್ಯೆ ನಿಂತು ನೋಡುತ್ತಿದ್ದ ಕೋಕಿಲಳಿಗೆ, 'ನಾನು ಶಿಕ್ಷೆ ಮುಗಿಸಿಕೊಂಡು ಬರೋವರೆಗೂ ಯಾರನ್ನೂ ಮದುವೆ ಆಗದೆ ಕಾಯಬೇಕು ಚಿನ್ನ ನೀನು' ಅಂತ ಬೇರೆ ಹೇಳಿದ್ದ! ಮನೆಯವರೆಲ್ಲ ಹೆದರಿದ್ದರು. ಅವಳೂ ಭಯಗ್ರಸ್ಥೆಯಾಗಿ ಎರಡು ವರ್ಷಗಳವರೆಗೆ ಇದ್ದಳು. ವಿಷಯ ತಿಳಿದಿದ್ದ ಇತರ ಕೇರಿಯ ಹುಡುಗರೂ ಅವಳ ತಂಟೆಗೆ ಬಂದಿರಲಿಲ್ಲ. ಆದರೆ ನಿಧಾನವಾಗಿ ಅವಳಿಗೊಬ್ಬ ಆಟೋ ಓಡಿಸುವ ಹುಡುಗ ಪರಿಚಯವಾದ. ಕಿರಣ ಅಂತ ಹೆಸರು. ನಾನು ನನ್ನ ಫುಟ್ಬಾಲ್ ಹುಡುಗರ ಜೊತೆ ಮೈದಾನದಿಂದ ಮನೆಗೆ ಹಿಂದಿರುಗುವಾಗ, ಎರಡು ಮೂರು ಸಲ ಅವಳು ಅವನ ಆಟೋದಲ್ಲಿ ಹಿಂದಿನ ಸೀಟಿನಲ್ಲಿ ಕೂತು ಅವನ ಕೈ ಹಿಡಿದುಕೊಂಡಿರೋದನ್ನ ನೋಡಿದ್ದೀನಿ. ನೋಡಿ, ಅವಳನ್ನ ಬಹಳ ಧೈರ್ಯವಂತೆ ಅಂದುಕೊಂಡಿದ್ದೆ. ಆದರೆ ಆ ಆಟೋದವನೊಂದಿಗೆ ಒಂದು ದಿನ ನಾಪತ್ತೆಯಾಗಿಬಿಟ್ಟಳು. ಕಾಲೇಜಿನಲ್ಲಿ ಟ್ರಿಪ್ ಇತ್ತು. ಇವಳೂ ಟ್ರಿಪ್ಪಿಗೆಂದು ಬಟ್ಟೆಬರೆ ಪ್ಯಾಕ್ ಮಾಡಿಕೊಂಡವಳು, ಕಾಲೇಜಿನ ಬಸ್ಸು ಹತ್ತದೆ ಆ ಆಟೋದವನೊಂದಿಗೆ ಓಡಿಬಿಟ್ಟಿದ್ದಳು. ಮನೆಯವರೆಲ್ಲ ಕಾಲೇಜಿನ ಟ್ರಿಪ್ಪು ಮುಗಿದು, ಬಸ್ಸು ಹಿಂದಿರುಗುವವರೆಗೆ ಏನೇನೂ ತಲೆಕೆಡಿಸಿಕೊಳ್ಳಲಿಲ್ಲ.